# ಬಾಟಲಿ ನೀರು: ಎಚ್ಚರ ವಹಿಸಿ

> ಬಾಟಲಿ ನೀರಿನಲ್ಲಿ ಪ್ಲಾಸ್ಟಿಕ್‌ನ ಅಂಶಗಳು ಅಪಾಯಕಾರಿ ಮಟ್ಟದಲ್ಲಿ ಇರುವುದು ನಿಜಕ್ಕೂ ಆತಂಕ ಹುಟ್ಟಿಸುವ ವಿಚಾರ. ನೀರು ಶುದ್ಧೀಕರಣ ಘಟಕಗಳಲ್ಲಿ ಸೂಕ್ತ ತಂತ್ರಜ್ಞಾನ ಬಳಕೆ ಆಗಿದೆಯೆ, ಗರಿಷ್ಠ ಮಟ್ಟದ ಸ್ವಚ್ಛತಾ ಕ್ರಮಗಳನ್ನು ಅಳವಡಿಸಲಾಗಿದೆಯೆ, ಇಲಾಖೆಯ ಸುರಕ್ಷತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆಯೆ ಎನ್ನುವುದನ್ನು ಆರೋಗ್ಯ ಇಲಾಖೆ ಕಾಲಕಾಲಕ್ಕೆ ಸರಿಯಾಗಿ ಪರಿಶೀಲಿಸಬೇಕು. ಆರೋಗ್ಯ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸದವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.

ಬಹುತೇಕ ನಗರಗಳಲ್ಲಿ ಇವತ್ತು ಕುಡಿಯುವ ನೀರು ಬಾಟಲಿಗಳಲ್ಲಿ ಲಭ್ಯವಿದೆ. ಹಳ್ಳಿಗಳಲ್ಲೂ ಸಭೆ, ಸಮಾರಂಭಗಳಿಗೆ ಬಾಟಲಿಗಳಲ್ಲೇ ಕುಡಿಯುವ ನೀರು ಪೂರೈಕೆಯಾಗುತ್ತಿದೆ. ಶುದ್ಧ ಕುಡಿಯುವ ನೀರನ್ನು ಸಂಸ್ಕರಿಸುವ ಘಟಕಗಳೂ ನಗರ, ಹಳ್ಳಿಗಳೆನ್ನದೆ ಎಲ್ಲೆಡೆ ನಾಯಿಕೊಡೆಗಳಂತೆ ಹುಟ್ಟಿಕೊಂಡಿವೆ. ನಲ್ಲಿ ಅಥವಾ ಬಾವಿ ನೀರಿಗಿಂತ ಬಾಟಲಿ ನೀರೇ ಹೆಚ್ಚು ಆರೋಗ್ಯಕರ ಎಂಬ ಭಾವನೆ ಎಲ್ಲೆಡೆ ಹಬ್ಬಿದೆ. ಆದರೆ ವಸ್ತುಸ್ಥಿತಿ ಬೇರೆಯೇ ಇದೆ ಎನ್ನುವುದನ್ನು ವಿಶ್ವ ಆರೋಗ್ಯ ಸಂಸ್ಥೆಯ ಇತ್ತೀಚಿನ ವರದಿ ಬಹಿರಂಗಪಡಿಸಿದೆ.

ಭಾರತ ಸಹಿತ ಹಲವು ದೇಶಗಳಲ್ಲಿ ವಿಶ್ವ ಆರೋಗ್ಯ ಸಂಸ್ಥೆ ನಡೆಸಿದ ತಪಾಸಣೆಯಲ್ಲಿ, ಬಾಟಲಿಯಲ್ಲಿ ಸಿಗುವ ನೀರಿನಲ್ಲಿ ಪ್ಲಾಸ್ಟಿಕ್ ಅಂಶಗಳು ಅಪಾಯಕಾರಿ ಮಟ್ಟದಲ್ಲಿ ಇರುವುದು ಗೊತ್ತಾಗಿದೆ. ಈ ಅಪಾಯಕಾರಿ ಪ್ಲಾಸ್ಟಿಕ್ ಅಂಶಗಳು ಜನರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎಂದು ವರದಿ ತಿಳಿಸಿದೆ. 9 ರಾಷ್ಟ್ರಗಳ 19 ಸ್ಥಳಗಳಲ್ಲಿ ಒಟ್ಟು 259 ಬಾಟಲಿ ನೀರುಗಳನ್ನು ತಪಾಸಣೆಗೆ ಒಳಪಡಿಸಲಾಗಿತ್ತು. ತಪಾಸಣೆಯ ಬಳಿಕ ಬಂದ ವರದಿಯನ್ನು ಗಮನಿಸಿದರೆ, ಈ ಬಾಟಲಿ ನೀರುಗಳಲ್ಲಿ ನಲ್ಲಿ ನೀರಿನಲ್ಲಿ ಇರುವುದಕ್ಕಿಂತ ಎರಡು ಪಟ್ಟು ಹೆಚ್ಚು ಅಪಾಯಕಾರಿ ಪ್ಲಾಸ್ಟಿಕ್ ಅಂಶಗಳು ಇರುವುದು ಗೊತ್ತಾಗಿದೆ. ಬಾಟಲಿ ನೀರಿನಲ್ಲಿ ಹಲವು ಕಡೆ ಪ್ಲಾಸ್ಟಿಕ್‌ನ ತುಣುಕುಗಳೂ ಪತ್ತೆಯಾಗಿರುವುದು ನಿಜಕ್ಕೂ ಆತಂಕ ಹುಟ್ಟಿಸುವ ಸಂಗತಿ. ಬಹುತೇಕ ಬಾಟಲಿ ನೀರಿನಲ್ಲಿ ನೈಲಾನ್, ಪಾಲಿಥಿಲಿನ್ ಟೆರಪ್ರಲೇಟ್ ಮುಂತಾದ ಅಪಾಯಕಾರಿ ಅಂಶಗಳು ಪತ್ತೆಯಾಗಿದ್ದು ಇದನ್ನು ಕುಡಿದವರಲ್ಲಿ ಆರೋಗ್ಯಕ್ಕೆ ಸಂಬಂಧಿಸಿ ಗಂಭೀರ ಪರಿಣಾಮಗಳು ಉಂಟಾಗಲಿವೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ.

ಸರ್ಕಾರ ಮತ್ತು ಸ್ಥಳೀಯ ಆರೋಗ್ಯ ಸಂಸ್ಥೆಗಳು ಈ ನಿಟ್ಟಿನಲ್ಲಿ ತುರ್ತು ಗಮನ ಹರಿಸಬೇಕಾದ ಅಗತ್ಯವಿದೆ. ಜಗತ್ತಿನಾದ್ಯಂತ ಬಾಟಲಿ ನೀರಿನ ಉದ್ಯಮವು ವಾರ್ಷಿಕ 14,700 ಕೋಟಿ ಡಾಲರ್ ಮೌಲ್ಯದ ಮಾರಾಟ ವಹಿವಾಟು ಹೊಂದಿದೆ. ಎಲ್ಲ ದೇಶಗಳಲ್ಲಿ ಇವತ್ತು ಇದೊಂದು ಬೃಹತ್ ಉದ್ಯಮವಾಗಿ ಬೆಳೆದಿದೆ. ಆದರೆ ಈ ಉದ್ಯಮವನ್ನು ಕಟ್ಟುನಿಟ್ಟಿನ ನಿಯಮಗಳ ಮೂಲಕ ನಿಯಂತ್ರಿಸುವತ್ತ ಸರ್ಕಾರಗಳು ಗಮನ ಕೊಡುತ್ತಿಲ್ಲ. ಆರೋಗ್ಯ ಇಲಾಖೆ ಈ ಕಡೆಗೆ ತುರ್ತು ಗಮನ ಹರಿಸಬೇಕಾದ ಅಗತ್ಯವಿದೆ. ನಾಯಿಕೊಡೆಗಳಂತೆ ಹುಟ್ಟಿಕೊಂಡಿರುವ ನೀರು ಶುದ್ಧೀಕರಣ ಘಟಕಗಳಲ್ಲಿ ಸೂಕ್ತ ತಂತ್ರಜ್ಞಾನ ಬಳಕೆ ಆಗಿದೆಯೆ, ಅಲ್ಲಿ ಗರಿಷ್ಠ ಮಟ್ಟದ ಸ್ವಚ್ಛತಾ ಕ್ರಮಗಳನ್ನು ಅಳವಡಿಸಲಾಗಿದೆಯೆ, ಇಲಾಖೆಯ ಸುರಕ್ಷತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆಯೆ ಎನ್ನುವುದನ್ನು ಆರೋಗ್ಯ ಇಲಾಖೆ ಕಾಲಕಾಲಕ್ಕೆ ಪರಿಶೀಲಿಸಬೇಕು. ನಿಯಮಗಳನ್ನು ಉಲ್ಲಂಘಿಸಿದವರ, ಆರೋಗ್ಯ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸದವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.

ಈ ಮಧ್ಯೆ ರಾಜ್ಯದಲ್ಲಿ ಬೇಸಿಗೆ ತಾಪ ತೀವ್ರವಾಗಿ ಏರುತ್ತಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹಲವು ಶುದ್ಧ ನೀರಿನ ಘಟಕಗಳು ನೀರಿನ ಕೊರತೆಯಿಂದಾಗಿ ಬಾಗಿಲು ಮುಚ್ಚುತ್ತಿರುವ ವರದಿಗಳು ಬಂದಿವೆ. ಈ ಸಲ ರಾಜ್ಯದಲ್ಲಿ ಬೇಸಿಗೆಯ ಅವಧಿ ದೀರ್ಘವಾಗಿರಲಿದೆ ಎಂದು ಹವಾಮಾನ ಇಲಾಖೆ ಈಗಾಗಲೆ ಮುನ್ಸೂಚನೆ ನೀಡಿದೆ. ಫೆಬ್ರುವರಿ ತಿಂಗಳೊಂದರಲ್ಲೇ ರಾಜ್ಯದಲ್ಲಿ ಶುದ್ಧ ನೀರಿನ ಕೊರತೆಯಿಂದಾಗಿ 6947 ಟೈಫಾಯ್ಡ್ ಪ್ರಕರಣಗಳು ಮತ್ತು 516 ವೈರಲ್ ಹೆಪಟೈಟಿಸ್ ಪ್ರಕರಣಗಳು ದಾಖಲಾಗಿವೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಇನ್ನೀಗ ಮದುವೆ, ಮುಂಜಿ, ಜಾತ್ರೆಗಳು ಹೆಚ್ಚುವುದರಿಂದ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರನ್ನು ಪೂರೈಸುವ ಕಡೆಗೆ ಸರ್ಕಾರ ಆದ್ಯತೆಯ ಮೇರೆಗೆ ಗಮನ ಹರಿಸುವ ಅಗತ್ಯವಿದೆ. ವಿಧಾನಸಭಾ ಚುನಾವಣೆ ಸಮೀಪಿಸಿದ್ದು ಬಹುತೇಕ ಜನಪ್ರತಿನಿಧಿಗಳು ಈಗ ಟಿಕೆಟ್ ಪಡೆಯುವುದು ಮತ್ತು ಚುನಾವಣೆಯ ಪ್ರಚಾರದತ್ತ ತಮ್ಮ ಗಮನ ಹರಿಸಿದ್ದಾರೆ. ಈ ಗದ್ದಲದ ಮಧ್ಯೆ ಜನರ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸುವುದರತ್ತ ನಿರ್ಲಕ್ಷ್ಯ ತೋರುವುದು ಖಂಡಿತಾ ಸರಿಯಲ್ಲ. ಸಾಂಕ್ರಾಮಿಕ ರೋಗಗಳು ಹರಡಲು ಮುಖ್ಯ ಕಾರಣವೇ ಕಲುಷಿತ ನೀರನ್ನು ಕುಡಿಯುವುದು. ರಾಜ್ಯದಲ್ಲಿ ನೀರಿನ ಪೂರೈಕೆ ಕೊರತೆಯಿಂದ ಮುಚ್ಚಿರುವ ಶುದ್ಧ ನೀರಿನ ಘಟಕಗಳನ್ನು ಮತ್ತೆ ತೆರೆಯುವುದೇ ಅಲ್ಲದೆ, ಇನ್ನಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸುವತ್ತ ಜನಪ್ರತಿನಿಧಿಗಳು ಮುಂದಾಗಬೇಕು.

■ **ಬಿ.ಎಂ. ಹನೀಫ್**




ಈಶ್ವರ್